ಶ್ರೀ ರಮೇಶ್ ಕುಮಾರ್.—ನೀವು ನಮ್ಮನ್ನು ನೋಡುವುದೇ ಇಲ್ಲ, ನಮಗೆ ಪ್ರಶ್ನೆ ಕೇಳಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ನೀವು ನೋಡುವುದಿಲ್ಲ ಎಂದರೆ ಹೇಗೆ ?

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಅವಕಾಶ ಕೊಡುವುದಿಲ್ಲ ತಾವು ಕೂಳಿತುಕೊಳ್ಳಿ. ಮಾನ್ಯ ನೀಲಕಂಠಪ್ಪನವರೇ ತಾವು ಕುಳಿತುಕೊಳ್ಳಿ.

ಶ್ರೀ ರಮೇಶ್ ಕುಮಾರ್. ಬೆಂಗಳೂರು ನಗರದ ಪರಿಸ್ಥಿತಿಯನ್ನು ಅರ್ಥಮಾಡಿ ಕೊಳ್ಳದಿದ್ದರೆ ಹೇಗೆ ಕೆ ನಮಗೆ ರಕ್ಷಣೆ ಕೊಡುವವರು ಯಾರು ?

ಶ್ರೀ ಸಿ. ಬೈರೇಗೌಡ.—ನಾವು ಇಲ್ಲಿ ಏತಕ್ಕೆ ಬರಬೇಕು ? ರುಜು ಮಾಡಿ ಆಚೆ ಹೋಗ ಬಹುದಲ್ಲ. ಸಣ್ಣ ಉಪ ಪ್ರಶ್ನೆ ಕೇಳಲಿಕ್ಕೆ ಆದರೂ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಸ್ವಲ್ಪ ಕೂಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ.—ನಾನು ಜವಾಬ್ದಾರಿಯುತವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಯಾರು ಯಾರಿಗೆ ಸೈಟುಗಳನ್ನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ಪತ್ರ ಬರೆದರೆ ಅವರಿಂದ ಆದಕ್ಕೆ ಉತ್ತರವಿಲ್ಲ.

ಅಧ್ಯಕ್ಷರು.—ನೀವು ಪ್ರಶ್ನೆಯನ್ನು ಹಾಕಿ. ನೀವು ಪ್ರಶ್ನೆಯನ್ನು ಹಾಕುವುದೇ ಇಲ್ಲ. ದಿವಸಕ್ಕೆ ಒಂದೊಂದು ಪ್ರಶ್ನೆಯನ್ನು ಹಾಕಿ.

ಶ್ರೀ ಸಿ. ಬೈರೇಗೌಡ.—ಉತ್ತರ ಕೊಡುವುದಕ್ಕೆ ಯೋಗ್ಯತೆಯಿಲ್ಲದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಛೇರ್ಮನ್‌ರವರು ಅಲ್ಲಿದ್ದರೆ ನಾವೇನು ಮಾಡಬೇಕು ? ನಾವು ಏನಾಗಬೇಕು ? ಪತ್ರ ಬರೆದರೆ ಅವರು ಉತ್ತರ ಕೊಡುವುದಿಲ್ಲ. ಇಲ್ಲಿ ನೀವು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ಈಗ ಅವಕಾಶ ಕೊಡುವುದಿಲ್ಲ, ನಿಯಮದ ಚೌಕಟ್ಟಿನೊಳಗಡೆ ಅವಕಾಶ ಕೊಡುತ್ತೇನೆ ತಾವು ಕುಳಿತುಕೊಳ್ಳಿ.

ಜಿಲ್ಲಾ ಪರಿಷತ್‌ಗಳ ಅಧ್ಯಕ್ಷ ಉಪಾಧ್ಯಕ್ಷರು ಹಚ್ಚಿನ ಪ್ರಯಾಣ ಭತ್ಯೆ ಪಡೆದಿರುವುದು.

೧೨೨೧. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಪಕ್ಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪರಿಷತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಪ್ರಯಾಣ ಭತ್ಯೆ ಪಡೆಯುವುದಕ್ಕೆ ಸರಕಾರವೇನಾದರೂ ನಿರ್ದಿಷ್ಟ ಸೂಚನೆ ನೀಡಿದೆಯೇ ?

ಆ) ಹಲವಾರು ಜನ ಜಿಲ್ಲಾ ಪರಿಷತ್ ಅಧ್ಯಕ್ಷ ಉಪಾಧ್ಯಕ್ಷರುಗಳು ಅಧಿಕ ಪ್ರಯಾಣ ಭತ್ಯೆ ಪಡೆದುದರ ಕುರಿತು ಆಡಿಟ್ ಆಕ್ಷೇಪಣೆಗಳೇನಾದರೂ ಬಂದಿವೆಯೇ ?

ಇ) ವಿಜಾಪುರ ಜಿಲ್ಲಾ ಪರಿಷತ್ ಅಧ್ಯಕ್ಷರ ನಿವಾಸ ಮತ್ತು ಕಚೇರಿಗಳ ಒಳ ಅಲಂಕಾರಕ್ಕಾಗಿ ಜಿಲ್ಲಾ ಪರಿಷತ್ ವೆಚ್ಚ ಮಾಡಿದ ರಕಮು ಎಷ್ಟು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.—

ಅ) ಇಲ್ಲ.

ಆ) ಇಲ್ಲ.

ಇ) ಮನೆ ಬಾಡಿಗೆ ರೂ. ೦.೧೧೯ ಲಕ್ಷಗಳು ಮತ್ತು ರೂ. ೦.೨೩೧ ಲಕ್ಷಗಳು ಪೀಠೋಪಕರಣಗಳಿಗೆ ಖರ್ಚಾಗಿರುತ್ತದೆ.

ಶ್ರೀ ಬಾಬುರೆಡ್ಡಿ ಎ. ತುಂಗಳ್.—ನನ್ನ (ಅ) ಪ್ರಶ್ನೆಗೆ ಜಿಲ್ಲಾ ಪರಿಷತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಪ್ರಯಾಣ ಭತ್ಯೆ ಪಡೆಯುವುದಕ್ಕೆ ಸರ್ಕಾರ ಮೇನಾದರೂ ನಿರ್ದಿಷ್ಟ ಸೂಚನೆ ನೀಡಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಇಲ್ಲವೆಂದು' ಉತ್ತರ ಕೊಡಲಾಗಿದೆ. ಕಳೆದ ಅಧಿವೇಶನದಲ್ಲಿ ಈ ಬಗ್ಗೆ ೧೯ ಜಿಲ್ಲೆಗಳಲ್ಲಿ ಪ್ರತಿಯೊಂದು ಜಿಲ್ಲೆಯ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಪ್ರಯಾಣ ಭತ್ಯ ಮತ್ತು ಮನೆಯ ಪೀಠೋಪಕರಣಗಳ ಬಗ್ಗೆ ಕೊಟ್ಟ ಉತ್ತರವನ್ನು ನೋಡಿದರೆ ಬಹುಶ: ಭಯವಾಗುತ್ತದೆ. ಏಕೆಂದರೆ ಬಹಳ ದೊಡ್ಡ ಉದ್ದೇಶವನ್ನು ಇಟ್ಟುಕೊಂಡು ಗಾಂಧೀ ಮಾರ್ಗದಿಂದ ಅಧಿಕಾರ ವಿಕೇಂದ್ರೀಕರಣ ಮಾಡಲಾಗಿದೆ. ಈಗ ಅವರ ಖರ್ಚುವೆಚ್ಚ ಪ್ರಯಾಣ ಭತ್ಯ ಮತ್ತು ಕಚೇರಿಗಳ ಹಾಗೂ ಮನೆಗಳ ಡೆಕೋರೇಷನ್ ನೋಡಿದರೆ ನಾವು ಗಾಂಧೀಮಾರ್ಗದಿಂದ ಬಹಳ ದೂರ ಹೋಗುತ್ತಿದ್ದೇವೆಂದು ಭಾಸವಾಗುತ್ತದೆ. ಅವರಿಗೆ ಸೌಕರ್ಯ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಒಬ್ಬೊಬ್ಬ ಜಿಲ್ಲಾ ಪರಿಷತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಮನೆಗಳ ಪೀಠೋಪಕರಣಗಳಿಗಾಗಿ ಖರ್ಚು ಮಾಡಿರುವುದು ಮಂತ್ರಿಗಳ ಮನೆಗೂ ಖರ್ಚುಮಾಡಿಲ್ಲವೆನ್ನುವ ಸಂಶಯ ಬರುತ್ತದೆ. ಇದು ಯಾವ ಗಾಂಧೀ ತತ್ವವನ್ನು ಅನುಸರಿಸುತ್ತದೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ನಾನು ಕೇಳಬಯಸುತ್ತೇನೆ. ಸಂಚಾರ ಭತ್ಯಕ್ಕೆ ಮಿತಿ ಇರಬೇಕು. ಅಧ್ಯಕ್ಷರೇ ತಮಗೂ ಸ್ವತಂತ್ರ ಗೊತ್ತಿದೆ. ಅಧಿಕಾರ ವಿಕೇಂದ್ರೀಕರಣವೆಂದು ಹೇಳುತ್ತೇವೆ, ಇವತ್ತು ಹಳ್ಳಿಗಳಲ್ಲಿ ಹೆಂಗಸರಿಗೆ ಕಕ್ಕಸುಗಳು ಇಲ್ಲ. ನನ್ನ ಊರಿನಲ್ಲಿಯೂ ಸಹ ಇಲ್ಲ. ಇಂಥದ್ದರಲ್ಲಿ ಅವರ ಪ್ರಯಾಣ ಭತ್ಯ ಮಿತಿಮೀರಿದೆ, ಈ ಬಗ್ಗೆ ನನ್ನ ಆಕ್ಷೇಪವಿದೆ. ದಯವಾಡಿ ಈ ಬಗ್ಗೆ ಮಿತಿ ಹಾಕಬೇಕು. ಸರ್ಕಾರ ಪ್ರವಾಸಭತ್ಯೆ, ಮನೆಗಳ ಪೀಠೋಪಕರಣ ಮತ್ತು ಕಚೇರಿಗಳ ಅಲಂಕಾರದ ಬಗ್ಗೆ ಒಂದು ನಿರ್ಬಂಧ ಹಾಕಬೇಕೆಂದು ಗಾಂಧೀತತ್ವವನ್ನು ಅಧಿಕಾರ ವಿಕೇಂದ್ರೀಕರಣದ ಮೂಲಕ ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡಿದ ಮಾನ್ಯ ನಜೀರ್‌ಸಾಬ್‌ರವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಜಿಲ್ಲಾ ಪರಿಷತ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಶಾಸನದ ಪ್ರಕಾರ ಟಿಎ, ಡಿಎ ಪಡೆಯುತ್ತಾರೆ. ಶಾಸನದಲ್ಲಿ ಏನು ಹೇಳುತ್ತೇವೆಂದರೆ ಅಧ್ಯಕ್ಷರು ರಾಜ್ಯಮಂತ್ರಿಗಳು ಏನೇನು ತೆಗೆದುಕೊಳ್ಳಬಹುದೋ ಅದನ್ನು ತೆಗೆದುಕೊಳ್ಳಬಹುದೆಂದು ಹೇಳಿದ್ದೇವೆ. ಉಪ ಮಂತ್ರಿಗಳಿಗೆ ಏನು ಕೊಡುತ್ತಿದ್ದೇವೆಯೋ ಅದನ್ನು ಉಪಾಧ್ಯಕ್ಷರು ತೆಗೆದುಕೊಳ್ಳಬೇಕೆಂದು ಶಾಸನ ಮಾಡಿದ್ದೇವೆ. ಮಾನ್ಯ ಸದಸ್ಯರು ಗಾಂಧೀವಾದದಂತೆ ಸರಳವಾಗಿ ಬದುಕಬೇಕು ಎಂದು ಏನು ಹೇಳಿದ್ದಾರೆ, ಈ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಬಿಜಾಪುರ ಜಿಲ್ಲಾ ಪರಿಷತ್ ಅಧ್ಯಕ್ಷರ ನಿವಾಸ ಮತ್ತು ಕಚೇರಿಗಳ ಒಳ ಅಲಂಕಾರಕ್ಕೆ ಆಗಿರುವ ಖರ್ಚಿನ ಬಗ್ಗೆ ಪ್ರಶ್ನೆ ಇದೆ. ಆಗಿರುವ ಖರ್ಚು ೨೩ ಮತ್ತು ೧೧ ಸಾವಿರ ರೂಪಾಯಿಗಳು ಎಂದು ಹೇಳಿದ್ದೇನೆ. ಇದು ಬಹಳ ದೊಡ್ಡದೆಂದು ಭಾವಿಸುವಷ್ಟು ದೊಡ್ಡ ಪ್ರಶ್ನೆ ಅಲ್ಲ. ಬೇಕಾದರೆ ಇನ್ನೊಂದು ಸಂದರ್ಭದಲ್ಲಿ ಇದಕ್ಕೆ ನಾನು ಉತ್ತರ ಹೇಳುತ್ತೇನೆ. ಅವರು ಜಿಲ್ಲಾ ಪರಿಷತ್ತಿನ ಕಾರ್ಯವಿಧಾನಕ್ಕೆ ಸಂಬಂಧಪಟ್ಟಂತೆ ರಾಜ್ಯಮಟ್ಟದಲ್ಲೂ ಪ್ರವಾಸ ಹೋಗಬೇಕಾಗುತ್ತದೆ. ಅವರ ಟಿ. ಎ. ಡಿ. ಎ. ಬಗ್ಗೆ ನಿರ್ಬಂಧ ಹಾಕುವಂಥ ಯಾವ ಸಲಹೆಯನ್ನೂ ಸರ್ಕಾರ ಪರಿಶೀಲನೆಯನ್ನು ಇಟ್ಟುಕೊಂಡಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಮಂಜೂರಾತಿ

೧೦೦೫ ಶ್ರೀ ಬಿ. ಲಕ್ಕಪ್ಪ. (ಚಿಕ್ಕ ನಾಯಕನಹಳ್ಳಿ),—ಮಾನ್ಯ ಪಾರ್ವಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿವೇಶನಗಳನ್ನು ಹಂಚಿಕೆ ಮಾಡುವಾಗ ಪ್ರತಿಯೊಂದು ಪ್ರದೇಶದಲ್ಲಿಯೂ ಶೇ. ೧೮ ರಷ್ಟು ನಿವೇಶನಗಳನ್ನು ಮಾಸಲಿಡಬೇಕಾಗಿರುವುದು ನಿಜವಲ್ಲವೇ ?

(ಆ) ಹಾಗಿದ್ದಲ್ಲಿ ೧೯೮೭ರ ಜನವರಿ ಜಾಹೀರಾತಿನ ಪ್ರಕಾರ ಹಂಚಿಕೆ ಮಾಡಲಾದ ನಿವೇಶನಗಳೆಷ್ಟು ?

(ಇ) ಈ ಪ್ರದೇಶದಲ್ಲಿ ಹರಿಜನ ಗಿರಿಜನರಿಗೆ ಕೊಟ್ಟ ಶೇಕಡಾವಾರು ನಿವೇಶನಗಳೆಷ್ಟು ?